ಮೊದಲಾಗಿ ನೋಡಿದ್ದು. ಅಲ್ಲಿಯವರೆಗೂ ಪತ್ರಿಕೆ, ಟಿವಿಗಳಲ್ಲಿ ಅವರನ್ನು ನೋಡಿದ್ದು. ವಿಮಾನದಲ್ಲೂ ಮೊದಲು ಆ ದಿನ ವಾಮನ ಅವರನ್ನು ನೋಡಿರಲಿಲ್ಲ. ತನ್ನ ಕ್ಯಾಬಿನ್ ಬ್ಯಾಗ್‌ಗಳನ್ನು ಮೇಲಿನ ಲಾಕರ್‌ನಲ್ಲಿ ಇರಿಸಬೇಕು ಎಂದು ತಯಾರಿ ನಡೆಸುತ್ತಿದ್ದ ವೇಳೆ ಸರ್‍ರನೆ ತನ್ನೂರಿನ ಟಾಕ್ಲೆ ಹಾಗೆ ಕಂಡ ವ್ಯಕ್ತಿಯೊಬ್ಬ ಪಕ್ಕದ ವ್ಯಕ್ತಿಗೆ ನಮಸ್ಕರಿಸುತ್ತಿದ್ದುದನ್ನು ಕಂಡ. ಆದರೆ, ಆತ ಟಾಕ್ಲೆ ಆಗಿರಲಿಲ್ಲ.

ಆಶ್ಚರ್ಯಕರವಾಗಿ ಕಂಡದ್ದು ಅರೆ, ಅಲ್ಲಿರುವವರು ಅವತಾರ್ ಕೃಷ್ಣ ಮಹಾರಾಜ್ ಎಂಬುದು. ''ಓಹ್ ಗಾಡ್'' ಎಂಬ ಉದ್ಗಾರ ಹೊರಟಿತ್ತು ವಾಮನನ ಬಾಯಲ್ಲಿ. ತನ್ನ ಪಕ್ಕದ ಸೀಟಿನಲ್ಲೇ ಅವತಾರ್ ಕೃಷ್ಣ ಇದ್ದಾರೆ ಎಂಬ ವಿಚಾರ ಅತ್ಯಂತ ಸಂತೋಷ ತಂದಿತ್ತು. ''ನಮಸ್ಕಾರ ಸರ್'' ಎಂದು ಹೇಳುತ್ತ ಪಂಡಿತ್ ದುರ್ಗಾದಾಸ್ ಅವರಿಗೆ ಗೌರವದಿಂದ ತನ್ನ ಕೈಗಳನ್ನು ಜೋಡಿಸಿದ್ದ. ಪರಿಚಯವನ್ನೂ ಹೇಳಿಕೊಂಡಿದ್ದ. ಅವರೂ ಗೋರಖಪುರಕ್ಕೇ ಹೊರಟವರಾಗಿದ್ದರು. ಅಲ್ಲಿ ಬಿಮಲ್‌ವರ್ಮಾ ಎಂಬುವವರ ಅತಿಥಿಯಾಗಿ ಮತ್ತೆ ಆ ಮುಂದಿನ ಮೂರು ದಿನಗಳಲ್ಲಿ ವಾರಾಣಾಸಿಯಲ್ಲಿ ನಡೆಯಲಿರುವ ವಸಂತ ಆಲಾಪನಾ ತ್ಯೋಹಾರ್ ಕಾರ್ಯಕ್ರಮದಲ್ಲಿ ತಮ್ಮದೂ ಒಂದು ಗಾಯನ ಕಾರ್ಯ ನಡೆಸುವವರಿದ್ದರು. ಆಯೋಜಕರು ಕಾರ್ಯಕ್ರಮ ಪಟ್ಟಿಯಲ್ಲಿ ಪ್ರತಿ ವರ್ಷವೂ ಇವರ ಗಾಯನವನ್ನು ಇಟ್ಟೇ ಇಡುತ್ತಾರಂತೆ.



ಹೀಗೇ ಬೆಳೆದ ಗೆಳೆತನ ಪಂಡಿತ್ ದುರ್ಗಾದಾಸರೊಂದಿಗೆ ಆತ್ಮೀಯವಾದ ದೊಡ್ಡ ವಿಶ್ವಾಸಾದರವನ್ನೇ ಮುಂದಿನ ದಿನಗಳಲ್ಲಿ ಸೃಷ್ಟಿಸಿತ್ತು. ವಾಮನನ ಜತೆ ಆ ದಿನದ ವಿಮಾನ ಪ್ರಯಾಣದಲ್ಲಿ ವಾಮನನಿಗೆ, ದುರ್ಗಾದಾಸ್ ತುಂಬಾ ಹತ್ತಿರಕ್ಕೆ ಒದಗಿ ಬಂದಿದ್ದರು. ''ವಾಮನ್ ಹೈ ನಾಮ್, ಮಗರ್ ಬಲವಾನ್ ಬಲಿ ಚಕ್ರವರ್ತಿ ಜೈಸಾ ಕಾಯ್ ಧರ್ಮಕಾ ಪ್ರಮಾಣ್'' ಎಂದು ಹಿಂದಿಯಲ್ಲಿ ವಾಮನನಿಗೆ ದುರ್ಗಾದಾಸ್ ತಮಾಷೆ ಕೂಡಾ ಮಾಡಿದ್ದರು.

ಅನಂತರ, ''ಅಭ್ಯುದಯ್ ನಿರ್ಮಾಣ್'' ಬಿಲ್ಡರ್ಸ್‌ನಲ್ಲಿ ಚೀಫ್ ಎಂಜಿನಿಯರ್ ಆಗಿದ್ದ ವಾಮನನ ಸುಪರ್ದಿಯಲ್ಲೇ ಬೆಂಗಳೂರಿನ ತನ್ನ ಸಂಗೀತ್ ಗುರುಕುಲ್ ಕೂಡಾ ನಿರ್ಮಿಸಿಕೊಂಡಿದ್ದರು. ವಾಮನ ಹೇಳಿದಷ್ಟೂ ಬಾಬ್ತನ್ನು ನೀಡಿದ್ದರು. ''ನನಗೆ ನಿನ್ನ ಮೇಲೆ ನಂಬಿಗೆ. ಮತ್ತೆ ಅದರ ವಿವರಗಳ ಜರೂರಿಲ್ಲ'' ಎಂದು ಲೆಕ್ಕದ ವಿವರ ಹೇಳಲು ಹೋದಾಗ ದುರ್ಗಾದಾಸ್ ಅದನ್ನು ನಿರಾಕರಿಸಿದ್ದರು. ದುರ್ಗಾದಾಸ್ ಹೆಂಡತಿ ಭಾನು ಸರಸ್ವತಿ ಕೂಡಾ ಉತ್ತಮ ಗಾಯಕಿ. ತಾನೇ ಮನೆಗೆ ಬಂದು ವಾಮನನ ಹೆಂಡತಿಗೆ ರಾಗಗಳನ್ನು, ಆಲಾಪಗಳನ್ನು ಹೆಚ್ಚು ಗಟ್ಟಿ ಮಾಡಿದ್ದರು. ಆಗಲೇ ಇಪ್ಪತ್ತೊಂದು ವರ್ಷಗಳು ಕಳೆದುಹೋಗಿದ್ದವು. ಅದೆಷ್ಟು ರೀತಿಯ ಬಾಂಧವ್ಯವನ್ನು ಒಂದು ಪ್ರಯಾಣ ನಿರ್ಮಿಸಬಹುದು ಎಂಬುದಕ್ಕೆ ದುರ್ಗಾದಾಸ್ ಮತ್ತು ವಾಮನನ ನಡುವಣ ವಿಶ್ವಾಸ ದೊಡ್ಡ ಉದಾಹರಣೆಯಾಗಿತ್ತು. ಊರಿನಲ್ಲಿರುವ ತನ್ನ ಅಣ್ಣನ ಸಹಪಾಠಿ ಟಾಕ್ಲೆಯನ್ನು ಮನಸ್ಸಿನಲ್ಲಿಟ್ಟುಕೊಂಡು ನೆಪವಿರದೆ ಹುಟ್ಟಿಕೊಳ್ಳುವ ಸ್ನೇಹದ ಒಡನಾಟ, ವಿಶ್ವಾಸದ ಬಂಧುರಗಳ ಎಳೆಎಳೆಯ ಉರುಳಾಟಗಳು ನಿಜಕ್ಕೂ ಸಂಗೀತದ ಆಲಾಪದಂತೆ ಮನಸ್ಸಿಗೆ, ಜೀವಕ್ಕೆ ಸಂಜೀವಿನಿಯಾಗಿ ನಿಲ್ಲುತ್ತವೆ ಎಂಬುದನ್ನು ವಾಮನ ಬಲವಾಗಿ ನಂಬಿದ್ದ. ಹಾಗೆ ನೋಡಿದರೆ ಅಣ್ಣ ಜಗದೀಶನೇ ದೂರವಾದನೇನೋ ಎಂದು ಅನಿಸುತ್ತಿತ್ತು. ಅಣ್ಣನ ಬಳಿ ಸಂಬಂಧ ಹಳಸಿರದಿದ್ದರೂ ಎಲ್ಲೋ, ಹೇಗೋ ದೂರದೂರವೇ ಆಗಿ ಉಳಿಯಿತು ತಮ್ಮಿಬ್ಬರ ನಡುವಿನ ಒಡನಾಟ ಎಂದು ಅನಿಸುತ್ತಿತ್ತು. ಆತ ದೂರದ ಜಪಾನಿನಲ್ಲಿ ತಾನು ಬೆಂಗಳೂರಿನಲ್ಲೇ ಎನ್ನುವ ದೊಡ್ಡ ದೂರ ಒಂದರ್ಥದ ಕಸಿವಿಸಿ ತರಹತ್ತಿತ್ತು.

ಊರಲ್ಲಿನ ಮನೆ, ಒಂದಿಷ್ಟು ವಿಸ್ತಾರದ ಗದ್ದೆ, ತೋಟ ಇತ್ಯಾದಿ ಇದ್ದಿವೆ ಎನ್ನುವುದು ಹೌದಾದರೂ